ನಮ್ಮ ಪುರಾಣ ಕಥೆಗಳಾದಿಯಾಗಿ ಕ್ವಾಂಟಮ್ ಸಿದ್ಧಾಂತ, ಬಿಗ್ ಬ್ಯಾಂಗ್ ಥಿಯರಿ ಕೂಡಾ ಈ 'ಪ್ಯಾರಲಲ್ ಯುನಿವರ್ಸ್'ನ ಶಕ್ಯತೆಯನ್ನೇ ಪ್ರಚುರಪಡಿಸುತ್ತದೆ. ಹಾಗಾದರೆ, ಅಸ್ತಿತ್ವದಲ್ಲಿರುವ ಅಸಂಖ್ಯ ವಿಶ್ವಗಳಲ್ಲಿ ಎಲ್ಲೋ ಒಂದು ಕಡೆ ಇದೇ ಸಮಯಕ್ಕೆ ನಿಮ್ಮಂತೆಯೇ ಇನ್ನೊಬ್ಬ 'ಮಯೂರ' ಕೈಯಲ್ಲಿ ಹಿಡಿದು ಈ ಲೇಖನ ಓದುತ್ತಿರಬಹುದಲ್ಲವೇ? ಇದೊಂದು ಅಸಾಧ್ಯದ ಕಲ್ಪನೆ ಎಂದಿಟ್ಟುಕೊಳ್ಳೋಣ. ಆದರೆ, ಇದೇ ಸಂದರ್ಭದಲ್ಲಿ ಬೇರೆ ಯಾವುದೋ ವಿಶ್ವದಲ್ಲಿ ಇನ್ಯಾರೋ ವ್ಯಕ್ತಿ, ಮತ್ಯಾವುದೋ ಕಾರ್ಯದಲ್ಲಿ ತೊಡಗಿಕೊಂಡಿರುವ ಸಾಧ್ಯತೆಯನ್ನಂತೂ ಅಲ್ಲಗಳೆಯುವಂತಿಲ್ಲ? ಅಂದಮೇಲೆ, ಅದು ನಮ್ಮ ಪ್ರಜ್ಞಾಪರಿಧಿಯ ಒಳಗೇ ಜರುಗುತ್ತಿರಬಹುದಾದ ಸಂಭಾವ್ಯತೆ ಕೂಡಾ ನಿರ್ಲಕ್ಷಿಸಬಹುದಾದ್ದೇನೂ ಅಲ್ಲ ತಾನೇ?

ಗ್ರೀಕ್ ತತ್ವಜ್ಞಾನಿ ಪ್ಲೇಟೋ ತನ್ನ **The Allegory of the Caves** ಎನ್ನುವ ಪ್ರಬಂಧದಲ್ಲಿ, ಈ ಸಮಾನಾಂತರ ಜಗತ್ತಿನ ಇರುವಿಕೆಯ ಸಾಧ್ಯತೆಯನ್ನು ಯಥೋಕ್ತವಾಗಿ ವಿಶ್ಲೇಷಿಸಿದ್ದಾನೆ. 'ಗುಹೆಯೊಂದರ ತುದಿಯಲ್ಲಿ ಗೋಡೆಗೆ ಮುಖಮಾಡಿ ನಿಲ್ಲಿಸಿ ಕತ್ತು ತಿರುಗಿಸಲಾಗದಂತೆ ಬಾಲ್ಯದಿಂದಲೂ ಬಂಧನಕ್ಕೊಳಗಾದ ಕೈದಿಗಳು ನಾವೆಲ್ಲ' ಎನ್ನುತ್ತಾನೆ ಆತ. ಗೋಡೆಯಮೇಲೆ ಕೃತಕವಾಗಿ ಒಂದಿಷ್ಟು ನೆರಳಿನಾಟವನ್ನು ಸೃಷ್ಟಿಸಿದರೆ ಅದೇ ನಿಜವಾಗಿ – ನಮ್ಮ ಸುತ್ತ ನಡೆಯುತ್ತಿರುವುದು, ಅದೇ ನಿಜವಾದ ಜಗತ್ತು ಎಂದು ಕೈದಿಗಳೆಲ್ಲ ಭ್ರಮಿಸುತ್ತಾರಲ್ಲವೇ. ಆದರೆ, ಅದರ ಹೊರತೂ ಮತ್ತೊಂದು ಜಗತ್ತಿರುವುದು ನಿಜ. ಅವರಲ್ಲೊಬ್ಬ ಕೈದಿ ಕೈಕೋಳ ಬಿಡಿಸಿಕೊಂಡು ಬಂದು ಆ ನಿಜ ಜಗತ್ತನ್ನು ಎದುರಿಸಿ ಬೆಚ್ಚಿಬಿದ್ದು; ವಾಪಸ್ಸು ಹೋಗಿ ಉಳಿದ ಕೈದಿಗಳಿಗೆ ತಾನು ನೋಡಿದ ಪರ್ಯಾಯ ಜಗತ್ತನ್ನು ವರ್ಣಿಸಿದರೆ, ಅವರು ಅದನ್ನು ನಂಬದಿರುವ ಸಾಧ್ಯತೆಯೇ ಹೆಚ್ಚು. ಹೀಗೆ, ನಮ್ಮ ನೋಟ, ನಂಬಿಕೆ, ಗ್ರಹಿಕೆ, ವಿಚಾರಗಳಿಗನುಗುಣವಾಗಿ ನಮ್ಮ ಸುತ್ತಲ ಜಗತ್ತೂ ರೂಪುಗೊಂಡಿದೆ ಎಂಬುದು ವಿದಿತ. ಅದೇ ಸಮಯಕ್ಕೆ ಬೇರೊಂದು ದೃಷ್ಟಿ, ಬೇರೊಂದು ಆಲೋಚನೆ, ಆಯ್ಕೆ, ಅಭೀಪ್ಸೆಗನುಗುಣವಾಗಿ ಮತ್ತೊಂದು ಜಗತ್ತೂ ಇರಬಹುದಾದದ್ದು ವಾಸ್ತವವೇ ಅಲ್ಲವೇ?

ಇವೆಲ್ಲವನ್ನೂ ವಿವೇಚಿಸಿದಾಗ, ಹಲವು ಜಗತ್ತುಗಳು ಏಕಕಾಲಕ್ಕೆ ಅಸ್ತಿತ್ವದಲ್ಲಿವೆ ಎನ್ನುವ ವಾದದಲ್ಲಿ ಹುರುಳಂತೂ ಇದೆ ಅನ್ನಿಸುವುದು ಸುಳ್ಳಲ್ಲ. ನಿರ್ದಿಷ್ಟ ಸ್ಥಳ, ಸಮಯದಲ್ಲಿ ಇವು ಒಂದಕ್ಕೊಂದು ಮುಖಾಮುಖಿಯಾಗುವುದೂ ನಿಜವಿರಬಹುದು. ವೈಜ್ಞಾನಿಕವಾಗಿ ಸಾಬೀತುಪಡಿಸಿ ತೋರಿಸಲಾಗದ್ದನ್ನೆಲ್ಲ ಅಸತ್ಯ ಅನ್ನಲಾಗುವುದಿಲ್ಲವಷ್ಟೇ. ನನಗಿರುವ ಪ್ರಶ್ನೆಯೆಂದರೆ – ಆ ಇನ್ನೊಂದು ಜಗತ್ತಿರುವುದು ನಮ್ಮ ಒಳಗೋ ಅಥವಾ ಹೊರಗೋ? ಒಳಗಿರುವ ಜಗತ್ತು ನಿಜವೋ, ಹೊರಗಿರುವುದು ದಿಟವೋ? ಒಳಗಿನದಾವುದು, ಹೊರಗಿನದಾವುದು ಎಂಬ ಸ್ಪಷ್ಟತೆ ನಮಗಿದೆಯೇ? ಹೊರಗಿನದೇ ಒಳಗಿನದಾಗಿ, ಒಳಗಿನದೇ ಹೊರಗಿನದಾಗಿ 'ಗೋಚರಿಸಿದರೆ' ನಾವದನ್ನು ಗುರುತಿಸಬಲ್ಲೆವೇ?

★★★

ಮಂಜನನ್ನು ಹೊಳೆಗದ್ದೆ ಟೋಲ್ ಸೆಂಟರಿನಲ್ಲಿ ಕಂಡದ್ದರ ಕುರಿತು ನನ್ನ ಸ್ನೇಹಿತನಲ್ಲಿ ಇನ್ನಷ್ಟು ಸಮಾಲೋಚಿಸಬೇಕೆಂದು, 'ಆತ ಮಂಜನೇ ಎನ್ನಲಿಕ್ಕೆ ಖಾತ್ರಿಯೇನು?' ಎನ್ನುವ ಪ್ರಶ್ನೆಯನ್ನು ನಾನು ಕೇಳುವ ಮುನ್ನವೇ–

'ಯಾರೊಡನೆಯೋ ಜೋರು ಜೋರು ಮಾತಾಡುತ್ತಿದ್ದ. ಈಗಷ್ಟೇ ಒಬ್ಬರನ್ನು ತೆಪ್ಪದಲ್ಲಿ ಹೊಳೆ ದಾಟಿಸಿ ಬಂದೆ ಎನ್ನುತ್ತಿದ್ದ. ಪುರಾವೆಯೆಂಬಂತೆ ಮುಂಡು, ಟವೆಲ್ಲೆಲ್ಲ ಒದ್ದೆಯಾಗಿದ್ದನ್ನೂ ಗಮನಿಸಿದೆ. ನಾನು ಹತ್ತಿರ ಹೋಗುವಷ್ಟರಲ್ಲಿ ಅದೆಲ್ಲೋ ನುಸುಳಿ ಮರೆಯಾಗಿಬಿಟ್ಟ. ಆತ ಮಂಜನೇ ಆಗಿರಲಿಕ್ಕೆ ಸಾಕು...' ಎಂದು ಉದ್ಗರಿಸಿದ ಆತ. ●